KATK900171522024

5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ತಿಪಟೂರು.

ಎಸ್.ಸಿ ಸಂಖ್ಯೆಃ 10015/2024

ಪ್ರಮಾಣೀಕರಿಸಿದ ದಿನಾಂಕಃ 27.04.2026
ಚಾಸಾ.7
ಫ್ರಾಸಾ.5

| | |
|---|---|
| ಹೆಸರು | ಸಚ್ಚಿದಾನಂದ @ ಸಚಿನ್ |
| ತಂದೆಯ ಹೆಸರು | ರಾಜಶೇಕರಯ್ಯ |
| ವಯಸ್ಸು | 33 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕೋಡಿಹಳ್ಳಿ, ತುರುವೇಕೆರೆ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 30.10.2023 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿಃ 25.10.2023 ರಂದು ನಾನು ಮತ್ತು ನಮ್ಮೂರಿನ ಶಿವಣ್ಣನವರು ನಮ್ಮ ತೋಟದಲ್ಲಿ ಕಾಯನ್ನು ಕಿತ್ತುಕೊಂಡು ಬಂದು ಅಟ್ಟಕ್ಕೆ ಹಾಕುತ್ತಿದ್ದು, ಆಗ ಸಂಜೆ ಸುಮಾರು 4.55

ಗಂಟೆಯ ಸಮಯಕ್ಕೆ ನಮ್ಮೂರಿನ ವಿರೂಪಾಕ್ಷಯ್ಯ ನವರು ಶಿವಣ್ಣನವರ ಫೋನ್ ಗೆ ಕರೆ ಮಾಡಿ ದಿಲೀಪನು ಕೋಡಿಹಳ್ಳಿ ಗ್ರಾಮದ ಕಾವ್ಯ ರವರನ್ನು ಕಲ್ಲುಗಳಿಂದ ತಲೆ ಮತ್ತು ಮುಖವನ್ನು ಜಜ್ಜಿ ಕೊಲೆ ಮಾಡಿರುತ್ತಾನೆಂದು ತಿಳಿಸಿದರು. ಆಗ, ನಾನು ನನ್ನ ಮೊಬೈಲಿನಿಂದ ಹೇಮಂತ್ ಗೆ ಕರೆ ಮಾಡಿ ಕೊಲೆಯ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನಾನು ಮತ್ತು ಶಿವಣ್ಣ ನಮ್ಮ ಮನೆಯಿಂದ ಹೊರ ಬರುವಾಗ ದೀಲಿಪನು ಬೈಕಿನಲ್ಲಿ ಬಂದಿದ್ದನ್ನು ನಾನು ನೋಡಿರುತ್ತೇನೆ. ನಂತರ ನಾನು, ಹೇಮಂತ್ ಹಾಗೂ ಶಿವಣ್ಣ ಮೂರು ಜನ ಈಶ್ವರಯ್ಯನವರ ರೇಷ್ಮೆ ತೋಟದಲ್ಲಿ ಹೋಗಿ ನೋಡಲಾಗಿ, ಸದರಿ ತೋಟದಲ್ಲಿ ಕಾವ್ಯರವರ ಮುಖವನ್ನು ಜಜ್ಜಿ, ಅವರು ಸ್ಥಳದಲ್ಲಿ ಮೃತ ಪಟ್ಟಿರುವುದು ಕಂಡುಬಂದಿರುತ್ತದೆ. ಅಲ್ಲೇ ಪಕ್ಕದ ಪುರುಷೋತ್ತಮ ರವರ ತೋಟದಲ್ಲಿ ಒಂದು ಮುರಿದ ಚಾಕು ಹಾಗೂ ದೀಲೀಪನಿಗೆ ಸೇರಿದ ಚಪ್ಪಲಿಗಳು ಹಾಗೂ ಟೋಪಿ ಬಿದ್ದಿದ್ದು ಆ ಸ್ಥಳದಲ್ಲಿ ನಮಗೆ ತಿಳಿದ ವಿಚಾರ ದಿಲೀಪನು ಕಾವ್ಯರವರನ್ನು ಜಗಳ ತೆಗೆದು ಚಾಕುವಿನಿಂದ ಹಲ್ಲೆ ಮಾಡಿ ಕಲ್ಲುಗಳಿಂದ ಮುಖ ಮತ್ತು ತಲೆಗಳನ್ನು ಜಜ್ಜಿ ಕೊಲೆ ಮಾಡಿರುತ್ತಾನೆಂದು ವಿಷಯ ತಿಳಿದುಬಂದಿರುತ್ತದೆ.

ಸದರಿ ದಿಲೀಪನು ಚಲಾಯಿಸಿಕೊಂಡು ಬಂದ ಬೈಕನ್ನು ನೋಡಿದರೆ ಗುರುತಿಸುತ್ತೇನೆ ಹಾಗೂ ಚಾಕು,ಚಪ್ಪಲಿಗಳು ಹಾಗೂ ಟೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬೈಕನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು–18 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಚಾಕು,ಚಪ್ಪಲಿಗಳು ಹಾಗೂ

ಟೋಪಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆಮಾಲು–13 ರಿಂದ 15 ಎಂದು ಗುರುತಿಸಲಾಗಿರುತ್ತದೆ.

ತುರುವೇಕೆರೆ ಸರ್ಕಲ್ ಇನ್ಸ್ ಪೆಕ್ಟರ್ ರವರು ನಮಗೆ ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ನೋಟೀಸಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟೀಸನ್ನು **ನಿ.ಪಿ–8** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–8(ಎ) ಎಂದು ಗುರುತಿಸಲಾಯಿತು. ದಿಃ 29.10.2023 ರಂದು ತುರುವೇಕರೆ ಸರ್ಕಲ್ ಇನ್ಸ್ ಪೆಕ್ಟರ್ ರವರು ನೋಟೀಸನ್ನು ನೀಡಿದ್ದು, ನಾನು ಹಾಗೂ ಹೇಮಂತ್ ರವರು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ನಮಗೆ ಬೆಳಗ್ಗೆ 6.00 ಗಂಟೆಗೆ ನೋಟೀಸನ್ನು ನೀಡಿದ್ದು, ನಾವು 6.15 ಗಂಟೆಗೆ ಠಾಣೆಗೆ ಹೋಗಿರುತ್ತೇವೆ. ನಾವು ಠಾಣೆಗೆ ಹೋದಾಗ ಠಾಣೆಯಲ್ಲಿ ಸರ್ಕಲ್ ಇನ್ಸ್ ಪೆಕ್ಟರ್, ಸಿಬ್ಬಂದಿಗಳು, ಆರೋಪಿ ದೀಲೀಪ್, ನಾನು ಹಾಗೂ ಹೇಮಂತ್ ರವರು ಹಾಜರಿದ್ದೆವು.

ದಿಃ 25.10.2023 ರಂದು ಕೋಡಿಹಳ್ಳಿ ಗ್ರಾಮದ ಕಾವ್ಯರವರನ್ನು ಜಗಳ ತೆಗೆದು ಚಾಕುವಿನಿಂದ ಹಲ್ಲೆ ಮಾಡಿ ನಂತರ ಈಶ್ವರಯ್ಯನವರ ತೋಟದ ಬದುವಿನ ಮೇಲೆ ಕೆಡವಿ ಕಲ್ಲುಗಳಿಂದ ತಲೆ ಮತ್ತು ಮುಖವನ್ನು ಜಜ್ಜಿ ಕೊಲೆ ಮಾಡಿರುತ್ತೇನೆ, ಕೊಲೆ ಮಾಡುವ ಮೊದಲು ನನ್ನ KA–41–H–9485 Bajaj, Discovery Bike ನಲ್ಲಿ ಬಂದು ಕೊಲೆ ಮಾಡಿ ನಂತರ ಅದೇ ಬೈಕಿನಲ್ಲಿ ತಿಪಟೂರು ತಾಲ್ಲೂಕಿನ ಅರಳಗುಪ್ಪೆ

ರೈಲ್ವೇ ಸ್ಟೇಶನ್ ನ ಕಾಂಪೌಂಡ್ ನ ಗೋಡೆಯ ಪಕ್ಕ ನಿಲ್ಲಿಸಿ ಹೋಗಿರುತ್ತೇನೆ, ಬಂದರೆ ತೋರಿಸುತ್ತೇನೆ ಎಂದು ಹೇಳಿರುತ್ತಾನೆ.

ನಂತರ ಅಲ್ಲಿಂದ ನಾವು ಸರ್ಕಾರಿ ಪೊಲೀಸ್ ಜೀಪಿನಲ್ಲಿ ಸರ್ಕಲ್ ಇನ್ಸ್ ಪೆಕ್ಟರ್, ಆರೋಪಿ ದಿಲೀಪ್, ಸಿಬ್ಬಂದಿಗಳು, ನಾನು ಮತ್ತು ಹೇಮಂತ್ ರವರು ಅರಳುಗುಪ್ಪೆ ರೈಲ್ವೇ ಸ್ಟೇಶನ್ ನ ಕಾಂಪೌಂಡ್ ನ ಬಳಿ ಹೋಗಿರುತ್ತೇವೆ. ದಿಲೀಪನು ಇಳಿದು ನಾನು ಕೊಲೆ ಮಾಡಿ ಈ ಬೈಕನ್ನು ದಿಃ 26.10.2023 ರಂದು ಬೆಳಗ್ಗೆ 5.00 ಗಂಟೆಗೆ ತಂದು ನಿಲ್ಲಿಸಿರುವುದಾಗಿ ತೋರಿಸಿರುತ್ತಾನೆ. ನಂತರ ಪೊಲೀಸರು ಬೈಕಿನ್ನು ಪರಿಶೀಲಿಸಿದ್ದು, ಅದರ ಮೇಲೆ ಯಾವುದೇ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ನಂತರ ಪೊಲೀಸರು ನಮ್ಮ ಮುಂದೆ ದೀಲೀಪನು ತೋರಿಸಿದ ಬೈಕನ್ನು ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಫೋಟೋವನ್ನು ತೆಗೆದಿರುತ್ತಾರೆ. ಸದರಿ ಸ್ಥಳದಲ್ಲಿ ಮಹಜರ್ ಮಾಡಿದ್ದು, ನಾವು ಸಹಿ ಮಾಡಿರುತ್ತೇವೆ. ಸದರಿ ಸ್ಥಳದಲ್ಲಿ ಮಹಜರ್ ಬೆಳಗ್ಗೆ 7.00 ರಿಂದ 8.00 ಗಂಟೆಯವರೆಗೂ ಜರುಗಿಸಿರುತ್ತಾರೆ. ಸದರಿ ಮಹಜರ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮಹಜರ್ ಅಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು **ನಿ.ಪಿ–9** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು **ನಿ.ಪಿ–10** ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣುತ್ತಿರುವ ಬೈಕ್ ಹಾಗೂ ನ್ಯಾಯಾಲಯದ ಮುಂದಿರುವ ಬೈಕ್ ಒಂದೇ ಆಗಿರುತ್ತದೆ.

ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಕೊಲೆಯಾದ ಸ್ಥಳದ ಮಹಜರ್ ಇದ್ದು, ಸದರಿ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಸದರಿ ಸ್ಥಳಕ್ಕೆ ಬರಲು ತುರುವೇಕೆರೆ ಸರ್ಕಲ್ ಇನ್ಸ್ ಪೆಕ್ಟರ್ ರವರು ನನಗೆ ಹಾಗೂ ಮಲ್ಲಿಕಾರ್ಜುನ್ ರವರಿಗೆ ನೋಟೀಸನ್ನು ನೀಡಿರುತ್ತಾರೆ. ಸದರಿ ನೋಟೀಸ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸ್ ಅಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟೀಸ್ ಅನ್ನು **ನಿ.ಪಿ–11** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–11(ಎ) ಎಂದು ಗುರುತಿಸಲಾಯಿತು.

ನಾನು ಹಾಗೂ ಮಲ್ಲಿಕಾರ್ಜುನ್ ರವರು ತುರುವೇಕೆರೆ ಸರ್ಕಲ್ ಇನ್ಸ್ ಪೆಕ್ಟರ್ ರವರ ಕಛೇರಿಗೆ ಹೋಗಿರುತ್ತೇವೆ. ಸದರಿ ಪೊಲೀಸ್ ಠಾಣೆಯಲ್ಲಿ ದಿಲೀಪ್, ತುರುವೇಕೆರೆ ಸರ್ಕಲ್ ಇನ್ಸ್ ಪೆಕ್ಟರ್, ಸಿಬ್ಬಂದಿಗಳು ಇದ್ದರು. ದಿಲೀಪನು ದಿಃ 25.10.2023 ರಂದು ಕೋಡಿಹಳ್ಳಿ ಗ್ರಾಮದ ಕಾವ್ಯರವನ್ನು ಚಾಕುವಿನಿಂದ ಹಲ್ಲೆ ಮಾಡಿ,ಬದುವಿನ ಮೇಲೆ ಕೆಡವಿ ಕಲ್ಲುಗಳಿಂದ ತಲೆ ಮತ್ತು ಮುಖವನ್ನು ಜಜ್ಜಿ ಕೊಲೆ ಮಾಡಿರುತ್ತೇನೆ. ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಆಗ ನಾನು, ಮಲ್ಲಿಕಾರ್ಜುನಯ್ಯ, ಆರೋಪಿ ದಿಲೀಪ್, ಸರ್ಕಲ್ ಇನ್ಸ್ ಪೆಕ್ಟರ್, ಸಿಬ್ಬಂದಿಗಳು ಸರ್ಕಾರಿ ಜೀಪಿನಲ್ಲಿ ಕೊಲೆ ಮಾಡಿದ ಸ್ಥಳವಾದ ಕೋಡಿಹಳ್ಳಿ ಗ್ರಾಮದ ಈಶ್ವರಯ್ಯನವರ ರೇಶ್ಮೇ ತೋಟದ ಹತ್ತಿರ ಬಂದು, ನಂತರ ದಿಲೀಪನು ಇಳಿದು ನಮ್ಮನ್ನು ಕೊಲೆ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಈಶ್ವರಯ್ಯನವರ ರೇಶ್ಮೆ ತೋಟದ ಬದುವಿನ ಮೇಲೆ ಇದೇ ಜಾಗದಲ್ಲಿ ನಾನು ಕಾವ್ಯಳನ್ನು ಕಲ್ಲುಗಳಿಂದ ಜಜ್ಜಿ ಕೊಲೆ ಮಾಡಿದೆ ಎಂದು

ತೋರಿಸಿರುತ್ತಾನೆ. ಅಲ್ಲೆ ಸ್ವಲ್ಪ ದೂರದಲ್ಲಿ ಕರೆದುಕೊಂಡು ಹೋಗಿ ಪುರುಷೋತ್ತಮ ರವರ ತೆಂಗಿನ ತೋಟದಲ್ಲಿ ನಾನು ಕಾವ್ಯಳನ್ನು ಜಗಳ ತೆಗೆದು ಚಾಕುವಿನಿಂದ ಹಲ್ಲೆ ಮಾಡಿದೆ ಈ ಜಾಗದಲ್ಲಿ ಚಾಕು ಮುರಿದು ಹೋಗಿದ್ದು, ಚಪ್ಪಲಿ ಹಾಗೂ ಟೋಪಿ ಇಲ್ಲೆ ಬಿದ್ದಿದ್ದವು ಎಂದು ತೋರಿಸಿರುತ್ತಾನೆ. ನಂತರ ಈಶ್ವರಯ್ಯನವರ ರೇಶ್ಮೇ ತೋಟದ ಬದುವಿನಲ್ಲಿ ಬಂದು ಸದರಿ ಸ್ಥಳದಲ್ಲಿ ಕೊಲೆ ಮಾಡಿರುತ್ತೇನೆ ಎಂದು ತೋರಿಸಿರುತ್ತಾನೆ. ಸದರಿ ಸ್ಥಳದಲ್ಲಿ ಮಹಜರ್ ಮಾಡಿ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ ಅನ್ನು ಮಧ್ಯಾಹ್ನ 12.00-1.00 ಗಂಟೆಯ ವರಗೊ ಜರುಗಿಸಿರುತ್ತಾರೆ. ಸದರಿ ಮಹಜರ್ ಅಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು **ನಿ.ಪಿ-12** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12(ಎ) ಎಂದು ಗುರುತಿಸಲಾಯಿತು.

ಆರೋಪಿ ದೀಲೀಪ್ ಈತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ದಿಲೀಪ್ ಈತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**(ಪಾಟೀ ಸವಾಲುಃ ಆರೋಪಿತರ ಪರ ಕು.ಎಲ್.ಟಿ.ಜೆ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ

(ಹೇಮಂತ್ ಕುಮಾರ್ ಸಿ.ಆರ್)
5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತಿಪಟೂರು.

ಮರುಪ್ರಮಾಣೀಕರಿಸಿದ ದಿನಾಂಕಃ 18.05.2026

(ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಹೆಚ್.ಎಲ್.ಬಿ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ

(ಹೇಮಂತ್ ಕುಮಾರ್ ಸಿ.ಆರ್)
5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತಿಪಟೂರು.